ಅಸಲು ದಾವೆ ನಂಬರ:103/2017

ವಾದಿ ಸಾಕ್ಷಿ-1

ದಿನಾಂಕ 18-06-2022 ರಂದು ಸಾಕ್ಷಿಗೆ ಪ್ರಮಾಣ ವಚನ ಬೋದಿಸಲಾಯಿತು.

**ಪಾಟೀ ಸವಾಲುಃ ಪ್ರತಿವಾದಿಯ ಪರ ವಕೀಲರಿಂದ.**

ಈ ಪ್ರಕರಣವನ್ನು ನಸಿಮಾ ಸುಲ್ತಾನ ಇವರು ದಾಖಲಿಸಿರುತ್ತಾರೆ. ನಸಿಮಾ ಸುಲ್ತಾನ ಇವರು ದೇವದುರ್ಗದಲ್ಲಿ ಇರುತ್ತಾರೆ ಎಂದರೆ ಸರಿ. ನಸಿಮಾ ಸುಲ್ತಾನ ಇವರಿಗೆ ಆರಾಮವಿಲ್ಲದ ಕಾರಣ ಇವರು ಸಾಕ್ಷ್ಯ ನುಡಿಯಲು ಬಂದಿರುವುದಿಲ್ಲ. ನಸಿಮಾ ಸುಲ್ತಾನ ಇವರು ಮಾನಸಿಕ ರೋಗಿ ಇರುತ್ತಾರೆ. ಕಳೆದ 15-20 ವರ್ಷಗಳಿಂದ ನಸಿಮಾ ಸುಲ್ತಾನ ಇವರು ಮಾನಸಿಕ ರೋಗಿಯಾಗಿರುತ್ತಾರೆ. ಈ ಪ್ರಕರಣವನ್ನು ತಯಾರಿಸಲು ವಕೀಲರಿಗೆ ನಸಿಮಾ ಸುಲ್ತಾನ ಇವರು ಮಾಹಿತಿಯನ್ನು ಕೊಟ್ಟಿರುತ್ತಾರೆ. ದಾವಾ ಆಸ್ತಿಯ ಪುರಸಭೆ ನಂಬರ ನನಗೆ ಹೇಳಲು ಬರುವುದಿಲ್ಲ.

ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿ ಬರೆದ ವಿಷಯ ನನಗೆ ಗೊತ್ತಿರುತ್ತದೆ . ದಾವಾ ಆಸ್ತಿಯು ನಸಿಮಾ ಸುಲ್ತಾನ ಇವರ ಹೆಸರಿನಲ್ಲಿ ಖರೀದಿ ಆಗಿರುತ್ತದೆ. 2011 ನೇ ಇಸವಿಯಲ್ಲಿ ಖರೀದಿ ಆಗಿರುತ್ತದೆ. ಅತ್ತರಉನ್ನಿಸಾ ಇವರ ಕಡೆಯಿಂದ ನಸಿಮಾ ಸುಲ್ತಾನ ಇವರು ಖರೀದಿ ಮಾಡಿರುತ್ತಾರೆ.

ಈ ಹಂತದಲ್ಲಿ ವಕೀಲರ ಕೋರಿಕೆಯ ಮೇರೆಗೆ ಮುಂದುವರೆದ ಪಾಟೀ ಸವಾಲೀಗಾಗಿ ಮುಂದೂಡಲಾಯಿತು.

(ಸಾಕ್ಷಿಯು ನೀಡಿದ ಸಾಕ್ಷ್ಯವನ್ನು ಯಥಾವತ್ತಾಗಿ ನನ್ನ ಉಕ್ತ ಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಿಕೊಳ್ಳಲಾಯಿತು.)

ಓ.ಹೇ.ಕೇ.ಸರಿ.ಇದೆ.

ಪ್ರ.ದ.ನ್ಯಾದಂ.ಗಳು, ದೇವದುರ್ಗ.